**Anti Land-Grabbing Action Committee**

**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

Website : http://savekarnataka.in email: karnatakasave@gmail.com

---

ದಿನಾಂಕ: **29. 11.2014**

ಗೆ,

ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು,

ಗೌರವಾನ್ವಿತ ಮುಖ್ಯಮಂತ್ರಿಗಳು,

ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಶಾಂತಿನಗರ ಗೃಹನಿರ್ಮಾಣ ಸಹಕಾರ ಸಂಘಕ್ಕೆ ಸೇರಿದ **66** ಎಕರೆ **22** ಗುಂಟೆ ಪ್ರದೇಶವು ಸಂಪೂರ್ಣವಾಗಿ ದುರುಪಯೋಗವಾಗಿರುವ ಬಗ್ಗೆ.

ಉಲ್ಲೇಖ: ನಾನು ದಿನಾಂಕ **13/10/2014** ರಂದು ಇದೇ ವಿಷಯವಾಗಿ ತಮಗೆ ಬರೆದಿರುವ ಪತ್ರ ಮತ್ತು ವಿವರಗಳು.

ವಿಷಯಕ್ಕೆ ಸಂಬಂಧಿಸಿದಂತೆ , **1984**ರಲ್ಲಿ ಶಾಂತಿನಗರ ಗೃಹನಿರ್ಮಾಣ ಸಹಕಾರ ಸಂಘಕ್ಕೆ **66** ಎಕರೆ **22** ಗುಂಟೆ ಜಮೀನನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡು ಸಂಘಕ್ಕೆ ನೀಡಿ, ಆ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗದ ವಸತಿಹೀನರಿಗೆ ನಿವೇಶನಗಳನ್ನು ನೀಡಲು ಆದೇಶಿಸಿತ್ತು. ಆದರೆ **20** ವರ್ಷಗಳ ಕಾಲ ಸಂಘವು ಯಾವುದೇ ಚಟುವಟಿಕೆಗಳನ್ನು ನಡೆಸಲಿಲ್ಲ ಮತ್ತು ಭೂಮಿಯನ್ನು ಅಭಿವೃದ್ಧಿ ಪಡಿಸಿ ವಸತಿಹೀನರಿಗೆ ನಿವೇಶನಗಳನ್ನು ಹಂಚಲಿಲ್ಲ. ಈ ಮಧ್ಯೆ ಅತ್ಯಂತ ಬೆಲೆ ಬಾಳುವ ಭೂಮಿ ಸಂಘದ ಹೆಸರಿಗೆ ನೀಡಿದನಂತರ, ಅದೇ ಹೆಸರಿನ ಬೋಗಸ್ ಸಂಘವು ಜಯನಗರದಲ್ಲಿ ಪ್ರಾರಂಭವಾಗಿರುವುದಾಗಿ ದಾಖಲೆಗಳನ್ನು ಸೃಷ್ಠಿಸಲಾಯಿತು. ನೈಜ ಸಂಘವು ಶಾಂತಿನಗರದಲ್ಲಿದ್ದರೆ, ಅದೇ ಹೆಸರಿನ ಬೋಗಸ್ ಸಂಘವು ಜಯನಗರದಲ್ಲಿದ್ದು, ಎರಡೂ ಸಂಘಗಳ ಮಧ್ಯೆ ತೀವ್ರ ಪೈಪೋಟಿ ನಡೆದು ಉಚ್ಛ ನ್ಯಾಯಾಲಯದಲ್ಲಿಯೂ ಹಲವಾರು ಬಾರಿ ವ್ಯಾಜ್ಯ ನಡೆದಿರುತ್ತದೆ.

ಗೃಹನಿರ್ಮಾಣ ಸಹಕಾರ ಸಂಘಗಳ ತನಿಖೆಗಾಗಿ ನೇಮಿಸಿದ್ದ ಶ್ರೀ ಜಿ.ವಿ.ಕೆ.ರಾವ್ ಸಮಿತಿಯು **1988**ರಲ್ಲಿ ವರದಿ ನೀಡಿತ್ತು. ಅದರಲ್ಲಿ ಶಾಂತಿನಗರ ಗೃಹನಿರ್ಮಾಣ ಸಹಕಾರ ಸಂಘವು ಪರಿಶೀಲನೆಗಾಗಿ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ ಎಂದು ತಿಳಿಸಲಾಗಿತ್ತು. ಸಂಘದ ಪದಾಧಿಕಾರಿಗಳು ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ, ಇದರಿಂದ ಸಂಘದ ಚಟುವಟಿಕೆಗಳನ್ನು ಪರಿಶೀಲಿಸಲಾಗಲಿಲ್ಲ ಎಂದೂ ತಿಳಿಸಲಾಗಿತ್ತು. ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಸಂಘವನ್ನು ಸರಿಪಡಿಸಲು ಸಾಧ್ಯವಿಲ್ಲವೆಂದು, ಸಂಘವನ್ನು 'ಡಿ' ಗುಂಪಿಗೆ ಸಮಿತಿಯು ಸೇರಿಸಿರುತ್ತದೆ. ಆದುದರಿಂದ ಸಮಿತಿಯು ಇಲಾಖೆಯವರು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ.

ದಿನಾಂಕ 4/10/2010 ರಂದು ಬೆಂಗಳೂರು ನಗರ ಪೋಲೀಸ್ ಆಯುಕ್ತರು ಸಂಘಕ್ಕೆ ಸಂಬಂಧಪಟ್ಟಂತೆ ವರದಿಯನ್ನು ನೀಡಿರುತ್ತಾರೆ. ಅವರು ವಿವರಿಸಿರುವಂತೆ ಸಂಘದ ಹೆಸರಿನಲ್ಲಿರುವ ಆಸ್ತಿಯ ಮೊತ್ತ ರೂ. 1456 ಕೋಟಿ ಬೆಲೆಯುಳ್ಳದ್ದಾಗಿರುತ್ತದೆ. ಸದರಿ ಭೂಮಿಯು ದುರುಪಯೋಗವಾಗುವ ಸಂಭವವೇ ಹೆಚ್ಚಿರುವುದರಿಂದ , ಅತ್ಯಂತ ಹೆಚ್ಚು ಬೆಲೆಯುಳ್ಳ ಆಸ್ತಿಯನ್ನು ಸಂರಕ್ಷಿಸುವ ದೃಷ್ಠಿಯಿಂದ ಆದಷ್ಟು ಬೇಗ ಸರ್ಕಾರ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

2005 ಮತ್ತು 2008 ರಲ್ಲಿ ಉಚ್ಛ ನ್ಯಾಯಾಲಯವೂ ಸಹ ಈ ಮುಂದಿನಂತೆ ಅಭಿಪ್ರಾಯ ಪಟ್ಟಿರುತ್ತದೆ. ಸಂಘವು ನಿಷ್ಕ್ರೀಯವಾಗಿದ್ದು , ಭೂಮಿಯು ಮೂರನೇ ವ್ಯಕ್ತಿಗಳಿಂದ ದುರುಪಯೋಗವಾಗುತ್ತಿದೆ. ಎರಡು ದಶಕಗಳಿಂದಲೂ ಸಂಘವು ಭೂಮಿಯನ್ನು ಅಭಿವೃದ್ಧಿ ಪಡಿಸಿಲ್ಲ ಮತ್ತು 2003 ರಿಂದ ಪ್ರಕರಣಕ್ಕೆ ಸಂಬಂಧವಿಲ್ಲದ ಮೂರನೇ ಗುಂಪಿನ ಅಭಿವೃದ್ಧಿಗಾರರ (developers) ಕುಮ್ಮಕ್ಕಿನಿಂದ ಅಲ್ಲಿ ಬಹಳಷ್ಟು ಚಟುವಟಿಕೆಗಳು ನಡೆಯುತ್ತಿರುತ್ತವೆ. ಸಂಘ ಸ್ಥಾಪನೆಯಾದ ಪ್ರಾರಂಭದಲ್ಲಿ ಮತ್ತು ಪ್ರಥಮದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆಯ ಮಂಜೂರಾತಿಯಾದ ದಿನದಂದು ಇದ್ದ ನೈಜ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಬೇಕೆಂದು ತೀರ್ಪಿತ್ತು, ಈ ಬಗ್ಗೆ ಇಲಾಖೆಯು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಕ್ರಮ ತಗೆದುಕೊಳ್ಳಬೇಕೆಂದು ಆದೇಶಿಸಿತ್ತು.

ದಿನಾಂಕ 21/10/2010 ರಂದು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆಗೆ ಪತ್ರ ಬರೆದು, ಈ ಆಸ್ತಿಯನ್ನು ಸಂರಕ್ಷಿಸುವುದು ಮತ್ತು ನಿವೇಶನಗಳನ್ನು ರಚಿಸಿ ಸದಸ್ಯರುಗಳಿಗೆ ವಿತರಿಸುವ ಅಂಶವು ಸಂಘಕ್ಕೆ ನಿಲುಕದ ಸಂಗತಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದುದರಿಂದ ಅತ್ಯಂತ ಬೆಲೆಬಾಳುವ ನಗರದ ಮಧ್ಯಭಾಗದಲ್ಲಿರುವ ಜಮೀನನ್ನು ಸಂರಕ್ಷಿಸಿ ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ವಿನಿಯೋಗಿಸಲು ಸರ್ಕಾರದ ಉನ್ನತ ಮಟ್ಟದ ಹಂತದಲ್ಲಿ ನಿರ್ಣಯ ಕೈತೊಳ್ಳಲು ಕೋರಿರುತ್ತಾರೆ.

ಬೋಗಸ್ ಸಂಘವು ನೈಜವಲ್ಲದ ಸದಸ್ಯರುಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಸಹಕಾರ ಸಂಘಗಳ ನಿಬಂಧಕರಿಂದ 2004ರಲ್ಲಿ ಒಪ್ಪಿಗೆ ಪಡೆದಿರುತ್ತದೆ. ಸಹಕಾರ ಸಂಘಗಳ ನಿಬಂಧಕರು ಪಟ್ಟಿಗೆ ಒಪ್ಪಿಗೆ ಕೊಡುವಾಗ, ಅನುಸರಿಸಬೇಕಾದ ಕ್ರಮಗಳನ್ನು ಸಂಘವು ಅನುಸರಿಸಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೆ , ಬೋಗಸ್ ಸಂಘವೆಂದು ತೀರ್ಮಾನವಾಗಿದ್ದ ಸಂಘದ ಸದಸ್ಯರುಗಳ ಪಟ್ಟಿಗೆ ಒಪ್ಪಿಗೆ ನೀಡಿರುತ್ತಾರೆ. ಅಷ್ಟೇ ಅಲ್ಲದೆ ಹಿಂದಿನ ದಿನಾಂಕವನ್ನು ನಮೂದಿಸಿ ಸದಸ್ಯರುಗಳ ಪಟ್ಟಿಗೆ ಅನುಮೋದನೆ ನೀಡಿರುವುದು ತಿಳಿದುಬಂದಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಡಾವಣೆ ನಕ್ಷೆಗೆ ಅನುಮತಿ ಪಡೆಯಲು ಹಣವನ್ನು ನಗದು ರೂಪದಲ್ಲಿ ಸಂದಾಯಮಾಡಿರುವುದಾಗಿ ತಿಳಿದುಕೊಂಡಿರುತ್ತೇನೆ. ನಗದು ರೂಪದಲ್ಲಿ ಹಣ ಸಂದಾಯ ಮಾಡಲು ಅವಕಾಶವಿಲ್ಲದಿರುವಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಹ ಸಂಘದ ಅಕ್ರಮಕ್ಕೆ ಕೈಜೋಡಿಸಿರುತ್ತದೆ.

ಈ ಅಕ್ರಮ ವ್ಯವಹಾರದಲ್ಲಿ ಅತ್ಯಂತ ಕುತೂಹಲಕಾರಿ ಸಂಗತಿಯೇನೆಂದರೆ, ನೈಜ ಮತ್ತು ಬೋಗಸ್ ಸಂಘದ ಮಧ್ಯೆ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ನಡೆಯುತ್ತಿದ್ದ ವ್ಯಾಜ್ಯವನ್ನು ಎರಡೂ ಸಂಘದವರು ಕೊಡುಕೊಳ್ಳವ ವ್ಯವಹಾರ ಮಾಡಿಕೊಂಡು ನ್ಯಾಯಾಲಯದ ಹೊರಗಡೆ ಬಗೆಹರಿಸಿಕೊಂಡು, ಮೊಕದ್ದಮೆಯನ್ನು ವಾಪಸ್ಸು ಪಡೆಯಲು ಅರ್ಜಿ ಸಲ್ಲಿಸಿದ್ದುದರಿಂದ, ನ್ಯಾಯಾಲಯವು ವ್ಯಾಜ್ಯವನ್ನು ದಿನಾಂಕ 4/11/2011ರಂದು (RFA No. 1204-1205/2009)ನ್ನು ವಿಲೇ ಮಾಡಿರುತ್ತದೆ(disposed).

ಸದರಿ ಭೂಮಿಯು ಉಭಯ ಪಕ್ಷದಾರರಿಗೆ ಸೇರಿದ ಆಸ್ತಿ ಆಗಿರುವುದಿಲ್ಲ. ಸರ್ಕಾರಕ್ಕೆ/ಸಾರ್ವಜನಿಕರಿಗೆ ಸೇರಿದ ಅತ್ಯಂತ ಬೆಲೆಬಾಳುವ ಆಸ್ತಿಯಾಗಿರುತ್ತದೆ. ಅದನ್ನು ಉಭಯ ಪಕ್ಷದಾರರು ಸ್ವಲಾಭಕ್ಕಾಗಿ ನ್ಯಾಯಾಲಯದ ಹೊರಗಡೆ ಬಗೆಹರಿಸಿಕೊಂಡು, ನೈಜ ಸದಸ್ಯರುಗಳ ಮತ್ತು ಸಂಘದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿರುವುದು ಸ್ಪಷ್ಟವಾಗಿರುತ್ತದೆ. ಈ ಸಂಬಂಧದಲ್ಲಿ ನಡೆದಿರುವ ಸಂಬಂಧಿಸಿದವರ ದೂರವಾಣಿ ಕರೆಗಳ ವಿವರಗಳನ್ನು ಮತ್ತು ಬ್ಯಾಂಕಿನ ವ್ಯವಹಾರಗಳನ್ನು ಪರಿಶೀಲಿಸಿದರೆ, ಈ ಅವ್ಯವಹಾರದ ಅಗಾಧತೆಯ ಅಂಶಗಳು ಹೊರಬರುತ್ತವೆ. ಆದುದರಿಂದ ದೂರವಾಣಿ ಕರೆಗಳ ಸಂಭಾಷಣೆಯ ವಿವರಗಳನ್ನು ಮತ್ತು ಬ್ಯಾಂಕಿನ ವ್ಯವಹಾರದ ವಿವರಗಳನ್ನು ಪರಿಶೀಲಿಸಬೇಕೆಂದು ವಿನಂತಿಸುತ್ತೇನೆ.

ಸಂಘದ ಹೆಸರಿನಲ್ಲಿ ನಿವೇಶನಗಳನ್ನು ಪಡೆದುಕೊಂಡಿರುವವರಲ್ಲಿ ಅತ್ಯಂತ ಶ್ರೀಮಂತರು ಮತ್ತು ಎನ್.ಆರ್.ಐ ಗಳೂ ಇರುತ್ತಾರೆ. ನ್ಯಾಯಾಂಗದ ಆದೇಶದಂತೆ ಅರ್ಹ ಮತ್ತು ನೈಜ ಸದಸ್ಯರುಗಳಿಗೆ ನಿವೇಶನಗಳನ್ನು ವಿತರಿಸದೆ, ನ್ಯಾಯಾಂಗದ ನಿಂದನೆಯಾಗಿರುತ್ತದೆ. ಅಧಿಕಾರಿ ವರ್ಗದವರು ಮತ್ತು ಭೂಮಾಫಿಯಾದವರು ಜೊತೆಯಾಗಿ ಅತ್ಯಂತ ಬೆಲೆ ಬಾಳುವ ಭೂಮಿಯನ್ನು ನುಂಗಿ ನೀರು ಕುಡಿದಿರುತ್ತಾರೆ.

ಮೇಲ್ಕಂಡ ಸಂಘದ ಅಕ್ರಮ ವ್ಯವಹಾರದಲ್ಲಿ ಬಲಾಢ್ಯರು ಮತ್ತು ಪ್ರಭಾವಶಾಲಿಗಳು ಭಾಗಿಗಳಾಗಿರುವುದರಿಂದ, ಇದುವರೆವಿಗೂ ಸರ್ಕಾರದಿಂದ ಯಾವುದೇ ಕ್ರಮಗಳಾಗಿರುವುದಿಲ್ಲ. ಇದೊಂದು ಅತ್ಯಂತ ಮೋಸದ ದೊಡ್ಡ ಪ್ರಕರಣವಾಗಿದ್ದು, ಸುಮಾರು **3000** ಕೋಟಿ ರೂಪಾಯಿಗಳ ಹಗರಣವಾಗಿರುತ್ತದೆ. ಇಂತಹ ಹಗಲು ದರೋಡೆಯಂತಹ ಅವ್ಯವಹಾರದ ಪ್ರಕರಣ ನಡೆದಿದ್ದರೂ ಸಹ, ಇದುವರೆವಿಗೂ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ, ನಾವು ಇಷ್ಟೊಂದು ಹೆಮ್ಮೆ ಪಡುವ ಕಾನೂನು ಮತ್ತು ನ್ಯಾಯ ಎಂಬ ಗೌರವಾನ್ವಿತ ತತ್ವಗಳು ಅರ್ಥವನ್ನು ಕಳೆದುಕೊಳ್ಳುತ್ತವೆ. ಆದುದರಿಂದ ದಯಮಾಡಿ ಈಗಲಾದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಸಾರ್ವಜನಿಕರ ಆಸ್ತಿಯನ್ನು ರಕ್ಷಿಸಬೇಕೆಂದು ಮತ್ತೊಮ್ಮೆ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ.ಟಿ.ರಾಮಸ್ವಾಮಿ)

ಸಂಚಾಲಕರು, ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

ಯಥಾನಕಲನ್ನು:

1. ಶ್ರೀ. ಶ್ರೀನಿವಾಸ ಪ್ರಸಾದ್ ರವರು, ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು, ರವರಿಗೆ, – ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಶ್ರೀ. ಮಹದೇವ್ ಪ್ರಸಾದ್ ರವರು, ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು, ರವರಿಗೆ - ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
3. ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ರವರಿಗೆ - ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.